# ಕರ್ನಾಟಕ ಸರ್ಕಾರ

ಸಂಖ್ಯೆ. ಗ್ರಾಅಪ 333 ಸೇಶಿಕಾ 2016 (ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ. 11.08.2017

## ಅಧಿಕೃತ ಜ್ಞಾಪನ

ವಿಷಯ:- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹೈದ್ರಾಬಾದ್ - ಕರ್ನಾಟಕ ಪ್ರದೇಶದ ಮೀಸಲಾತಿಯನ್ವಯ ಆಯ್ಕೆಯಾಗಿರುವ ಪರೀಕ್ಷಾರ್ಥ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ತರಬೇತಿ ನೀಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 333 ಸೇಶಿಕಾ 2016 ದಿನಾಂಕ 06.04.2017
2. ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 333 ಸೇಶಿಕಾ 2016 (ಭಾಗ) 19.04.2017 ಮತ್ತು 21.04.2017.

*****

ಉಲ್ಲೇಖ (2)ರ ಅಧಿಕೃತ ಜ್ಞಾಪನದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಹೈದ್ರಾಬಾದ್ - ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ನೇಮಕಾತಿ ಹೊಂದಿರುವ 07 ಜನ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ದಿನಾಂಕ 31.07.2017 ರಿಂದ 05.08.2017 ರವರೆಗೆ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇಲ್ಲಿಗೆ ತರಬೇತಿಗೆ ನಿಯೋಜಿಸಲಾಗಿರುವುದನ್ನು ಮಾರ್ಪಡಿಸಿ, ದಿನಾಂಕ 14.08.2017 ರಿಂದ 19.08.2017 ರವರೆಗೆ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇಲ್ಲಿಗೆ ತರಬೇತಿಗೆ ನಿಯೋಜಿಸಲಾಗಿದೆ.

ತರಬೇತಿಯ ಅವಧಿಯಲ್ಲ ಈ ಕೆಳಕಂಡ ವಿಷಯಗಳ ಕುರಿತು ಸೂಕ್ತ ತರಬೇತಿಯನ್ನು ಪರಿಣಿತರಿಂದ ಏರ್ಪಡಿಸುವಂತೆ ತಿಳಿಸಿದೆ:-

## I. ಸೇವಾ ವಿಷಯಗಳು:-

1. ಪರೀಕ್ಷಾರ್ಥ ಅವಧಿ ಮಂಜೂರಾತಿ
2. ರಜಾ ಮಂಜೂರಾತಿ
3. ವೇತನ ಶ್ರೇಣಿ / ವೇತನ ನಿಗದಿ
4. 10 ವರ್ಷ / 15 ವರ್ಷ / 20 ವರ್ಷ/ 25 ವರ್ಷ ಮತ್ತು 30 ವರ್ಷಗಳ ವಿಶೇಷ ವೇತನ ಬಡ್ತಿಗಳ ಬಗ್ಗೆ.
5. ನಿವೃತ್ತಿ ವೇತನ / ಕುಟುಂಬ ವೇತನ / ಉಪದಾನ / ಪಿಂಚಣಿ ಪರಿವರ್ತಿತ ಮೌಲ್ಯ
6. ಪ್ರಯಾಣ ಭತ್ಯೆ / ರಜಾ ರಿಯಾಯಿತಿ ಸೌಲಭ್ಯ / ಸ್ವಗ್ರಾಮ ರಿಯಾಯಿತಿ ಸೌಲಭ್ಯ

ಪು.ತಿ.ನೋ.

## II. ಲೆಕ್ಕಪತ್ರಗಳ ನಿರ್ವಹಣೆ:

1. ಸಾಮಾನ್ಯ ನಗದು ಪುಸ್ತಕ ನಿರ್ವಹಣೆ / ಕಾಮಗಾರಿ ನಗದು ಪುಸ್ತಕ ನಿರ್ವಹಣೆ / ಅಳತೆ ಪುಸ್ತಕ
2. ಆಯವ್ಯಯ ಪಟ್ಟಿ ತಯಾರಿಕೆ
3. ವಿವಿಧ ಕಾಮಗಾರಿಗಳಿಗೆ ವಿವಧ ಲೆಕ್ಕಶೀರ್ಷಿಕೆಯಡಿಯಲ್ಲಿ ಒದಗಿಸಿದ ಅನುದಾನದ ಬಗ್ಗೆ ವಿವರ.
4. ಮಹಾಲೇಖಪಾಲರ ಆಕ್ಷೇಪಣೆಗಳ ಬಗ್ಗೆ ಹಾಗೂ ಅವುಗಳ ತೀರುವಳಿ ಕುರಿತು
5. ಪತ್ರಾಂಕಿತ ಅಧಿಕಾರಿಗಳ ವೇತನ ಪ್ರಮಾಣ ಪತ್ರ ನೀಡುವ ಕುರಿತು
6. ಪತ್ರಾಂಕಿತ ಅಧಿಕಾರಿಗಳ ರಜಾ. ವಿಷಯಗಳ ಕುರಿತು ತರಬೇತಿ ಹಾಗೂ ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ತರಬೇತಿ.

(ಎಸ್. ರಂಗನಗೌಡ) 11/08/2017
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಆನಂದರಾವ್ ಸರ್ಕಲ್, ಬೆಂಗಳೂರು.
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ದಾವಣಗೆರೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ.
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
9. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
10. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.